

# 5 ಸ್ಟೆಪ್ ಸರ್ಕ್ಯುಲರ್ ಟಾಪ್

**ಈ 5–ಹಂತದ ವೃತಾಕಾರದ ಟಾಪೊಲೆಯುವುದು ಬಹಳ ಸುಲಭ ಮತ್ತು ಬೇಸಿಗೆಗೆ ಹಾರಿಯಾಗಿರುತ್ತೆ.**

## ವಸ್ತುಗಳ ವಿವರ

60 ಇಂಚು ಅಗಲವಿರುವ 2.5ಮೀಟರ್ ಬಟ್ಟೆ
5–ಹಂತದ ಟಾಪ್ ನ್ ಟೆಂಪ್ಲೇಟ್
ಮಾರ್ಕರ್
ಅಳತೆ ಪಟ್ಟಿ
ಕತ್ತರಿ
ಪಿನ್ಸ್
ಊಷಾ ಜನೋಮ್ ರೋಲ್ಡ್ ಹೆಮ್ ಫುಟ್
ದಾರ

ಈಗ ಮೊದಲು ಬಟ್ಟೆಯನ್ನು ಅರ್ಧಕ್ಕೆ ಮಡಚಬೇಕು ಅನಂತರ ಅದನ್ನು ಇನ್ನು ಒಂದು ಅರ್ಧಕ್ಕೆ ವೀಡಿಯೋದಲ್ಲಿ ತೋರಿಸಿರುವ ಹಾಗೆ ಮಡಚಬೇಕು.

## ಹಂತ 01 : ಟೆಂಪ್ಲೇಟ್ ಮಾರ್ಕಿಂಗ್ ಮತ್ತು ಕಟ್ಟಿಂಗ್

ಈಗ ನಾವು www.ushasew.com ವೆಬ್ ಸೈಟ್ ಇಂದ ಡೌನ್ ಲೋಡ್ ಮಾಡಿಕೊಂಡಿರುವ ಟೆಂಪ್ಲೇಟನ್ನು ಬಟ್ಟೆಯ ಮೇಲೆ ಇಡೋಣ. ನಾವು ಟೆಂಪ್ಲೇಟ್ ನ ನೇರವಾದ ಎಡ್ಜನ್ನು ಬಟ್ಟೆಯ ಮೇಲೆ ಸರಿಯಾಗಿದೆಯೆ ಎಂದು ಖಚಿತಪಡಿಸಿಕ್ಕೊಳ್ಳಿ, ನಂತರ ಅದನ್ನು ಸರಿಯಾಗಿ ಹೊಂದಿಸಿ ಪಿನ್ ಹಾಕಬೇಕು.


ಈಗ ಮಾರ್ಕರ್ ಸಹಾಯದಿಂದ ಟೆಂಪ್ಲೇಟ್ ನಲ್ಲಿ ಇರುವಂತೆ ಮಾರ್ಕ್ ಮಾಡಿಕ್ಕೊಳ್ಳಿ, ಎಚ್ಚರದಿಂದ ಮಾಡಿ ಇದು ಬಹಳ ಮುಖ್ಯ, ನಂತರ ಟೆಂಪ್ಲೇಟ್ಟನಿಂದ ಪಿನ್ ಗಳನ್ನು ತೆಗೆಯಿರಿ.
ಈಗ ನಾವು ಮಾರ್ಕ್ ಮಾಡಿರುವಂತೆ ಕತ್ತರಿಯ ಸಹಾಯದಿಂದ ಬಟ್ಟೆಯನ್ನು ಕತ್ತರಿಸಲು ಪ್ರಾರಂಭಿಸೋಣ.ಜಾಗರೂಕತೆಯಿಂದ ಕತ್ತರಿಸಿ. ಈಗ ನಾವು ಮೊದಲನೆ ಹಂತವನ್ನು ಮುಗಿಸಿದ್ದೀವಿ. ಹಂತ 2 : ಈಗ ನಾವು ಮಡಚಿರುವ ಬಟ್ಟೆಯನ್ನು ತೆಗೆದು ನೋಡೋಣ. ಇದು ಟೆಂಪ್ಲೇಟ್ ಅಲ್ಲಿರುವಂತೆ ಇದೆ. ಇದು ನಿಮ್ಮ ಕತ್ತಿನ ಅಳತೆ ಮತ್ತು ಇದು ಸುತ್ತಳತೆ.

## ಹಂತ 2: ಕತ್ತಿನ ಭಾಗವನ್ನು ಮುಗಿಸೋಣ.

ಊಷಾ ಸ್ಟಂಡರ್ಡ್ ಪ್ರೆಸ್ಸರ್ ಫುಟನ್ನು ತೆಗೆದು ರೋಲರ್ ಹೆಮ್ ಫುಟನ್ನು ಹಾಕಿ. ಇದನ್ನು ಸರಿಯಾಗಿ ಜೋಡಿಸಿ ಪ್ರೆಸ್ಸರ್ ಫುಟಿಗೆ ನೆಕ್ಲೈನ್ ನ ಕೊನೆಯನ್ನು ಹೊಂದಿಸಿ. ನಾವು ಬಟ್ಟೆಯನ್ನು ಕಾಲು ಇಂಚು ಮಡಚಿ ಫ್ಲಾಟ್ ಹೆಮ್ಮಿಂಗ್ ಮಾಡಬೇಕು. ನೆನಪಿರಲಿ ಫ್ಯಾಬ್ರಿಕ್ಸೆಲೆಕ್ಟರ್ಯಲನ್ನುನೀವುAನಲ್ಲಿಇಡಬೇಕು. ಇದುನೇರಹೊಲಿಗೆಗೋಸ್ಕರಹೊಲಿಗೆಯಉದ್ದ 2.5 ಇರಬೇಕು.



ವಿಡಿಯೊೀದಲ್ಲಿ ತೋರಿಸಿರುವ ಹಾಗೆ ಈಗ ಬಟ್ಟೆಯನ್ನು ಒಳಕ್ಕೆ ಮಡಚ್ಚುತ್ತಾ ಫ್ಲಾಟ್ ಹೆಮ್ಮಿಂಗನ್ನು ಹೊಲೆಯಬೇಕು. ಇದು ಪೂರ್ತಿ ಕತ್ತಿನ ಭಾಗದ ಕೊನೆವರೆಗೂ ಹೊಲೆಯಬೇಕು. ಈಗ ನಿಮ್ಮ ಬಟ್ಟೆಯ ಕತ್ತಿನ ಭಾಗ ಹೀಗೆ ಕಾಣಿಸುತ್ತದೆ.




## ಹಂತ 3 : ಹೆಮ್ ಲೈನ್ ಹೊಲೆಯುವುದು

ಈ ಹಂತದಲ್ಲಿ ನಾವು ಬಟ್ಟೆಯ ಬದಿಯನ್ನು ಫ್ಲಾಟ್ ಹೆಮ್ಮಿಂಗ್ ನಿಂದ ಸುಂದರವಾದ ಫಿನಿಶಿಂಗ್ ಕೊಡೋಣ.



ನಾವು ಇದೇ ಕ್ರಮವನ್ನು ಪುನರಾವರ್ತಿಸೋಣ. ಕಾಲು ಇಂಚು ಬಟ್ಟೆಯನ್ನು ಮಡಚಿ ಹೊಲೆಯಲು ಪ್ರಾರಂಭಿಸೋಣ ಮತ್ತು ಬಟ್ಟೆಯ ಅಂತ್ಯದವರೆಗೂ ಹೊಲೆಯಬೇಕು.ಸ್ವಲ್ಪ ಕಷ್ಟವೆನಿಸಿದರೂ ಸುಲಭವಾಗಿ ಹೊಲೆಯಬಹುದು. ಹೆಚ್ಚುವರಿ ದಾರವನ್ನು ಕತ್ತರಿಸಿ. ನಿಮ್ಮ ಹೊಲಿಗೆ ಕಾಣಲು ಹೀಗಿರುತ್ತದೆ. ಮತ್ತು ಕತ್ತಿನ ಭಾಗವೂ ಹೀಗೆ ಕಾಣಿಸುತ್ತದೆ.
ಹಂತ 4 : ನಾವು ತೋಳುಗಳನ್ನು ಹೊಲೆಯಲು ಎರಡೂ ಬದಿಯನ್ನು ಮೊದಲು ಹೊಲೆಯಬೇಕು. ಇದನ್ನು ಮಾಡಲು ನಾವು ಟೆಂಪ್ಲೇಟನ್ನು ಬಟ್ಟೆಯ ಮೇಲ್ಭಾಗದಲ್ಲಿಡಬೇಕು. ನೀವು ಮಧ್ಯಭಾಗದಲ್ಲಿ ಒಂದು ನೇರವಾದ ಗೆರೆಯನ್ನು ಕಾಣುತ್ತೀರಿ ಅದನ್ನು ಬಳಸಿ ಪಾಯಿಂಟನ್ನು ಬಟ್ಟೆಯ ಮೇಲೆ ಮಾರ್ಕ್ ಮಾಡಿ. ಈಗ ಟೆಂಪ್ಲೇಟನ್ನು ತಿರುಗಿಸಿ ಇದೇ ವಿಧಾನವನ್ನು ಇನ್ನೊಂದು ಭಾಗಕ್ಕೂ ಅನುಸರಿಸಿ.







ಇದು ನಿಮ್ಮ ಮಾರ್ಕಿಂಗ್ಸ್. ಹೊಲೆಯಲು ಅನಕೂಲವಾಗುವಂತೆ ನಾವು ಮಾರ್ಕ್ ಮಾಡಿರುವ ಪಾಯಿಂಟನ್ನು ರೂಲರ್ ನ ಸಹಾಯದಿಂದ ಸೇರಿಸೋಣ.ಅದು ನೇರವಾಗಿರುವಂತೆ ನೋಡಿಕ್ಕೊಳ್ಳಿ, ಬಟ್ಟೆಯನ್ನು ಪಿನ್ ಗಳ ಸಹಾಯದಿಂದ ಭದ್ರಗೋಳಿಸಿ. ಈಗ ನಾವು ಪಿನ್ ಹಾಕಿರುವ ಬಟ್ಟೆಯನ್ನು ಹೊಲೆಯನ್ನು ಪ್ರಾರಂಭಿಸೋಣ. ಇದಕ್ಕೆ ನಾವು ಹೆಮ್ಮಿಂಗಿಗೆ ಬಳಸಿದ ಪ್ರೆಸ್ಸರ್ ಫುಟ್ಟನ್ನು ತೆಗೆದು ರೆಗುಲರ್ ಫೂಟ್ಟನ್ನು ಜೋಡಿಸಿ. ಹೊಲಿಗೆಯ ಉದ್ದವನ್ನು 5 ದಕ್ಕೆ ಇಡಬೇಕು. ಇದಾದ ಮೇಲೆ ಮಾರ್ಕ್ ಮಾಡಿರುವ ಗೆರೆಯನ್ನು ಪ್ರೆಸ್ಸರ್ ಫುಟ್ಟ್ ಸಹಾಯದಿಂದ ಹೊಲೆಯಲು ಪ್ರಾರಂಭಿಸಿ.ಸ್ವಲ್ಪ ಹೊಲೆದ ನಂತರ ರೆವೆರ್ಸ್ ಸ್ಟಿಚ್ ಸೆಲೆಕ್ಟರನ್ನು ಬಳಸಿ ರೆವೆರ್ಸ್ ಹೊಲಿಗೆ ಹಾಕಬೇಕು, ಇದು ಹೊಲಿಗೆಯನ್ನು ಒಂದೇ ಕಡೆಯಿರಲು ಸಹಾಯವಾಗುತ್ತದೆ. ಗೆರೆಯ ತುದಿಯವರೆಗೂ ಹೀಗೆ ಹೊಲೆಯುತ್ತಾ ಬನ್ನಿ. ದಾರವನ್ನು ಕತ್ತರಿಸಿ ನಿಮ್ಮ ಹೊಲಿಗೆಗಳು ಸರಿಯಾಗಿದೆಯಾ ಎಂದು ಪರಿಶೀಲಿಸಿ, ಅದು ಹೀಗೆ ಕಾಣಬೇಕು. ಇದು ಸರಿಯಾಗಿದೆಯೆಂದು ಪರಿಶೀಲಿಸಿ ಇದೇ ಕ್ರಮವನ್ನು ಇನ್ನೊಂದು ಗೆರೆಗೂ ಅನುಸರಿಸಿ.





## ಹಂತ 5 :ಕತ್ತಿನ ಭಾಗವನ್ನು ಮುಕ್ತಾಯ ಮಾಡೋಣ.



ಊಷಾ 3 ವೇ ಕಾರ್ಡಿಂಗ್ ಮತ್ತು ಬೀಡಿಂಗ್ ಫುಟನ್ನು ಬಳಸಿ ವೀಡಿಯೊೀದಲ್ಲಿ ತೋರಿಸಿರುವ ಹಾಗೆ ಹೊಲೆಯಿರಿ. ನಮ್ಮ ವೆಬ್ ಸೈಟ್ www.ushasew.com ಅಲ್ಲಿ ಈ ವೀಡಿಯೋವನ್ನು ನೀವು ನೋಡಬಹುದು.

ಅಧ್ಭುತವಾಗಿದ ಅಲ್ವಾ! ನೀವು ಈ 5 ಹಂತದ ಟಾಪನ್ನು ಹೆಡ್ ಬ್ಯಾಂಡ್ ಮತ್ತು ಡ್ಯಾಂಗ್ಲರ್ ಕಿವಿಯೋಲೆಯೊಂದಿಗೆ ಹೊಂದಿಸಿಕ್ಕೊಳ್ಳಬಹುದು. ತುಂಬಾ ಚನ್ನಾಗಿ ಕಾಣಿಸುತ್ತೀರ. ಈ ಟಾಪ್ ನಿಮ್ಮ ಅಂದವನ್ನು ಹೆಚ್ಚಿಸುತ್ತದೆ. ನೀವು ನಿಮ್ಮ ಸ್ನೇಹಿತರೊಂದಿಗೆ ಶಾಪಿಂಗಿಗೆ ಹೋಗಲು ಇದನ್ನು ಧರಿಸಬಹುದು.